O.S. ನಂಬರಃ 82/2018

ಡಿ. ಡಬ್ಲ್ಯೂಃ 1

ದಿಃ 19-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ ವಾದಿಯರ ಪರ ಶ್ರೀ ಎನ್.ಐ.ಬಿ. ವಕೀಲರಿಂದ</u>

ನಾನು ವ್ಯವಸಾಯ ಮಾಡುತ್ತೇನೆ. ಆರೋಪಿಯಾಗಿ ನಾನು 2 ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇನೆ. ನನ್ನ ಮೇಲೆ 6 ಕ್ರಿಮಿನಲ್ ಪ್ರಕರಣಗಳು ಅಂಕೋಲಾ ನ್ಯಾಯಾಲಯದಲ್ಲಿ ಇರುತ್ತವೆ ಎಂದರೆ ಅವುಗಳಲ್ಲಿ ನಿರಾಪರಾಧಿ ಎಂದು ತೀರ್ಮಾನವಾಗಿದೆ, ಜಮೀನಿನ ವಿಷಯವಾಗಿ ಇರುವ ಕ್ರಿಮಿನಲ್ ಪ್ರಕರಣ ಚಾಲ್ತಿಯಲ್ಲಿವೆ. ಸಾಕ್ಷಿ ಮುಂದುವರೆದು ನಾನು ಸೀ ಬರ್ಡ್ ಕೂಲಿ ಕಾರ್ಮಿಕರ ಸಂಘದ ಅಧ್ಯಕ್ಷನಿದ್ದ ಅವಧಿಯಲ್ಲಿ ಹೋರಾಟ ಮಾಡಿದ್ದಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದಾರೆ. ಸದ್ರಿ ಪ್ರಕರಣಗಳೆಲ್ಲವು ಹೊಡೆದಾಟದ ಪ್ರಕರಣಗಳು ಎಂದರೆ ಸರಿ. ಆಸ್ಪತ್ರೆಯಲ್ಲಿ ವೈದ್ಯರಿಗೆ ಮತ್ತು ರೋಗಿಗಳಿಗೆ ತೊಂದರೆ ಕೊಟ್ಟ ವಿಷಯವಾಗಿ ನನ್ನ ಮೇಲೆ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ಸುಳ್ಳು ಪ್ರಕರಣ ದಾಖಲಿಸಿದ್ದರು ಎಂದು ಹೇಳುತ್ತಾರೆ. ನಾನು ಅಂದಾಜು 10 ವರ್ಷಗಳಿಂದ ನ್ಯಾಯಾಲಯಕ್ಕೆ ಬಂದು ಹೋಗುತ್ತಿದ್ದೇನೆ ಎಂದರೆ ಸಾಕ್ಷಿ 5-6 ವರ್ಷವಾಗಿರಬಹುದು ಎಂದು ಹೇಳುತ್ತಾರೆ. ಬೆದರಿಕೆ ಹಾಕುವ ಪ್ರಕರಣದಲ್ಲಿ ನಾನು ಮುಂಚೂಣಿಯಲ್ಲಿರುತ್ತೇನೆ ಎಂದರೆ ಸರಿಯಲ್ಲ. ಹಟ್ಟಿಕೇರಿ ವ್ಯಾಪ್ತಿಯಲ್ಲಿ ಕೂಲಿ ಕಾರ್ಮಿಕರ ಸಂಘ ಕಟ್ಟಿಕೊಂಡು ಬೆದರಿಕೆ ಹಾಕುತ್ತಿದ್ದೇನೆ ಎಂದರೆ

ಸರಿಯಲ್ಲ. ಸಾಕ್ಷಿ ಕೂಲಿ ಕಾರ್ಮಿಕರಿಗೆ ಮಧ್ಯವರ್ತಿಗಳು ಕಮಿಷನ್ ಪಡೆಯುವುದನ್ನು ನಿಲ್ಲಿಸಲು ಡಿ.ಸಿ. ಹಾಗೂ ತಹಶೀಲ್ದಾರವರ ಗಮನಕ್ಕೆ ತರಲು ಪ್ರಯತ್ನಿಸಿದ್ದೆನೆ ಎಂದು ಹೇಳುತ್ತಾರೆ. ಸ್ವದ್ರಿ ಸಂಗತಿ ಸುಳ್ಳಿನಿಂದ ಕೂಡಿದೆ ಎಂದರೆ ಸಾಕ್ಷಿ ಈ ಕುರಿತಾಗಿ ಪತ್ರಿಕಾ ವರದಿಯಾಗಿದೆ ಮತ್ತು ಕಚೇರಿಯಲ್ಲಿ ಕಡತಗಳು ಸಿಗುತ್ತವೆ ಎಂದು ಹೇಳುತ್ತಾರೆ. ನಾನು ಒಂದಿಲ್ಲ ಒಂದು ರೀತಿಯಲ್ಲಿ ಸಮಾಜ ವಿರೋಧಿ ಕೆಲಸದಲ್ಲಿ ತೊಡಗಿದ್ದೇನೆ ಎಂದು ವಾದಿ ಹೇಳುತ್ತಾರೆ ಎಂದರೆ ಸರಿಯಲ್ಲ.

ಮಹಾಸತಿ ದೇವಸ್ಥಾನ ಅಭಿವೃದ್ದಿ ಸಮಿತಿ ಹೊನ್ನಿಕೇರಿ, ಕುಂಬಾರಕೇರಿ ಮತ್ತು ಲಕ್ಷ್ಮೀಶ್ವರ ತಾಲೂಕು ಅಂಕೋಲಾ ಇದು 2013 ರಲ್ಲಿ ಸ್ಥಾಪನೆಯಾಗಿದೆ. ಸ್ವದ್ರಿ ಸಮಿತಿ ನೊಂದಾದ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಮಹಾಸತಿ ದೇವಸ್ಥಾನ ಅಭಿವೃದ್ದಿ ಸಮಿತಿ ಎಂದು ಮಾತ್ರ ಇದೆ ಎಂದು ಹೇಳುತ್ತಾರೆ. ಸ್ವದ್ರಿ ಮಹಾಸತಿ ದೇವಸ್ಥಾನ ಅಭಿವೃದ್ದಿ ಸಮಿತಿಯ ವಾರ್ಷಿಕ ಆಡಿಟ್ ಮಾಡಿಸಲಾಗುತ್ತದೆ. ಪ್ರತಿವಾದಿ 1,2, 4 ರಿಂದ 12 ರವರು ಸಂಘದ ಪದಾಧಿಕಾರಿಗಳು ಎಂದರೆ ಸರಿ. ಸಂಘದವರು ನನಗೆ ಸಾಕ್ಷಿ ನುಡಿಯಲು ಠರಾವು ಮಾಡಿಲ್ಲ ಎಂದರೆ ಸರಿಯಲ್ಲ. ಸ್ವದ್ರಿ ಠರಾವು ಪ್ರತಿಯನ್ನು ಪ್ರಕರಣದಲ್ಲಿ ಹಾಜರುಪಡಿಸಿಲ್ಲ ಎಂದರೆ ಅದನ್ನು ಯಾರು ಕೇಳಿಲ್ಲ ಎಂದು ಹೇಳುತ್ತಾರೆ. ಈ ಪ್ರಕರಣದಲ್ಲಿ ಸಾಕ್ಷ ಹೇಳಲು ಸಂಘದವರು ಅಧಿಕಾರ ನೀಡಿಲ್ಲ, ನನಗೆ ಸಾಕ್ಷಿಯನ್ನು ಹೇಳಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ

ಜೆ ಎಂ ಎಫ ಸಿ, ಅಂಕೋಲಾ.